# ಕ್ರಿಸ್ತನ ಮಹಿಮೆಗಾಗಿ ಹೊಸ ಆರಾಧನೆ

ಸಾವಿರಾರು ಯೆಹೂದ್ಯರ ಆರಾಧನೆ ಕ್ರಮವು ಒಂದೇ ದಿನದಲ್ಲಿ ಬದಲಾಯಿತು! ಪಂಚಾಶತ್ತಮ ದಿನದಂದು ಪೇತ್ರನ ಸುವಾರ್ತೆಯನ್ನು ಕೇಳಿದ ಮೂರು ಸಾವಿರ ಜನರಲ್ಲಿದ್ದ ಧಾರ್ಮಿಕ ಭಾವನೆಗಳು ಬದಲಾದವು.

ಅವರ ಜೀವನ ಪರ್ಯಂತ ಮೋಶೆಯ ಧರ್ಮಶಾಸ್ತ್ರವನ್ನೆ ಅನುಸರಿಸಿದ್ದರೂ, ಕೂಡ ಅಪೊಸ್ತಲರ ಕೃತ್ಯಗಳು 2ರಲ್ಲಿ ಅವರುಗಳು ಪರಿವರ್ತನೆಗೊಂಡು ಕ್ರೈಸ್ತರಾದರು. ಈ ಹಿಂದೆ ಕೇಳರಿಯದ ವಿಧದಲ್ಲಿ, ಸಾವಿರಾರು ಜನರು ದೇವರನ್ನು ಆರಾಧಿಸಿದರು. ಹಳೇ ಒಡಂಬಡಿಕೆಯ ಶೈಲಿಯು ಅವರ ಜೀವನದಿಂದ ಹೊರಟು ಹೋಗಿತ್ತು. ಆಶ್ಚರ್ಯಕರವಾದ ಸಂಗತಿಯು ಜರುಗಿ, ಧರ್ಮಶಾಸ್ತ್ರವು - ಚದರಿಹೋದ ಘಟನೆಯು ಉಂಟಾಗಿತ್ತು. ಯೇಸುವಿನ ಶಿಲುಬೆಯನ್ನು ಅನುಸರಿಸುವ ಮೂಲಕ, ನಿತ್ಯತ್ವದ ನಿರೀಕ್ಷೆಯು ಜನರಲ್ಲಿ ಉಂಟಾಗಿತ್ತು. ಈ ವಿಧದ ನೂತನವಾದ ಆರಾಧನೆಯು, ದೇವರ ಮಾರ್ಗದರ್ಶನದಲ್ಲಿ ಉಂಟಾಗಿತ್ತು.

## ಒಂದು ಹೊಸ ಆರಾಧನೆಯ ಪ್ರದರ್ಶನ

ಅವರು ಕ್ರಿಸ್ತನಿಗೆ ಪರಿವರ್ತನೆಗೊಂಡಾಗ, ಅವರ ಆರಾಧನೆ ಮತ್ತು ದಿನನಿತ್ಯದ ಜೀವಿತದಲ್ಲಿ ಹೊಸತನವು ಉಂಟಾಯಿತು, "ಇವರು ಅಪೊಸ್ತಲರ ಬೋಧನೆಯನ್ನು ಕೇಳು ವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42). ಈ ಹಿಂದೆ ಜರುಗಿದ್ದ ಯಾವುದೇ ಪಂಚಾಶತ್ತಮ ದಿನದಂದು ಈ ರೀತಿಯಾದ ಹೊಸ "ಕಾರ್ಯವು ಉಂಟಾಗಿರಲಿಲ್ಲ. ಅವರು ಧರ್ಮಶಾಸ್ತ್ರವನ್ನು ಅನುಸರಿಸುತ್ತಿದ್ದಂತೆ, ಈ ಹೊಸ ಆಚರಣೆಯಲ್ಲಿ ದೃಢಚಿತ್ತರಾಗಿದ್ದರು."

ಈ ಪಂಚಾಶತ್ತಮ ದಿನದಂದು ನಾಲ್ಕು ಸಂಗತಿಗಳು ಜರುಗಿದವೆಂದು ಲೂಕನು ತಿಳಿಸಿರುವನು. ಆದಿ ಕ್ರೈಸ್ತರು ಅಪೊಸ್ತಲರ "ಬೋಧನೆಯನ್ನು" ಮುಂದುವರಿಸಿದರು. ಧರ್ಮಶಾಸ್ತ್ರದ ಬೋಧನೆಯನ್ನು ಅನುಸರಿಸಲಿಲ್ಲ. ಅಪೊಸ್ತಲರ ಬೋಧನೆಗಳು ಧರ್ಮಶಾಸ್ತ್ರಕ್ಕೆ ಅನುಗುಣವಾಗಿದ್ದವೋ ಅಥವಾ ಇಲ್ಲವೋ ಎಂದು ಲೆಕ್ಕಿಸದೆ, ಅವರ ಪ್ರಕಾರವೇ ಜೀವಿಸಲು ಆರಂಭಿಸಿದರು. ದೇವಾಲಯದ ಸಾರ್ವಜನಿಕ ಕೊಠಡಿಗಳಲ್ಲಿ ಬಹಳಷ್ಟು ಬೋಧನೆಯನ್ನು ಮಾಡಿದರು (ಅಪೊಸ್ತಲರ ಕೃತ್ಯಗಳು 2:46).

ಎರಡನೆಯದಾಗಿ ಅವರು "ಅನ್ಯೋನ್ಯತೆಯಲ್ಲಿ" ದೃಢವಾಗಿ ಮುಂದುವರಿದರೇ ವಿನಃ (ಕೊಯಿನೋನಿಯಾ) ಧರ್ಮಶಾಸ್ತ್ರದ ದಶಮಾಂಶದಲ್ಲಿ ಮುಂದುವರಿಯಲಿಲ್ಲ. "ಅನ್ಯೋನ್ಯತೆ" ಎಂಬ ಪದಕ್ಕೆ ಹೊಸ ಒಡಂಬಡಿಕೆಯಲ್ಲಿ ಅನೇಕ ಅರ್ಥಗಳಿವೆ. ಆದಾಗ್ಯೂ ಈ ಹಿನ್ನೆಲೆಯಲ್ಲಿ ಇತರರ ಕೊರತೆಗಳನ್ನು ಪರಿಹಾರ ಮಾಡುವದು ಎಂಬ ಅರ್ಥವಾಗಿದೆ. ಪರಿವರ್ತನೆಗೊಂಡವರು ತಮ್ಮ ಸ್ವಾಸ್ತ್ಯವನ್ನು ಮಾರಿ ಕೊರತೆಯನ್ನು ಹೊಂದಿದ್ದ ಯೆರೂಸಲೇಮಿನವರಿಗೆ ಹಂಚಿದರು (ಅಪೊಸ್ತಲರ ಕೃತ್ಯಗಳು 2:45). ತರುವಾಯ, ಯೆರೂಸಲೇಮಿಗೆ ಪ್ರವಾಸಕ್ಕಾಗಿ ಬಂದಿದ್ದ ಯೆಹೂದ್ಯರು ತಮ್ಮ ಮನೆಗಳಿಗೆ ಹಿಂದಿರುಗಿ, ದೇವರ ರಾಜ್ಯದಲ್ಲಿ ಆಡಳಿತ ನಡೆಸುವ ಆತನ ಮಗನಾದ ಮೆಸ್ಸೀಯನ ಕುರಿತು ತಿಳಿಯಲು ತವಕಿಸಿದರು.

ಮೂರನೆಯದಾಗಿ, ಪರಿವರ್ತನೆಗೊಂಡ ಯೆಹೂದ್ಯರು ಒಟ್ಟಾಗಿ "ರೊಟ್ಟಿ ಮುರಿದರು," ಒಟ್ಟಾಗಿ ಊಟ ಮಾಡಿದರು ಎಂಬ ಅರ್ಥವಿದ್ದರೂ (ಅಪೊಸ್ತಲರ ಕೃತ್ಯಗಳು 2:46), ಅಪೊಸ್ತಲರ ಸಿದ್ಧಾಂಥದ ಪ್ರಕಾರ ಆರಾಧನೆಯ ಕ್ರಮವನ್ನು ಆಚರಿಸುತ್ತಿದ್ದರು. ಇದು,

ಸಹಜವಾದ ಒಂದು ಹೊಸ ಪದ್ಧತಿಯಾಗಿತ್ತು. ಸಾಮಾನ್ಯವಾಗಿ ಭೋಜನದಲ್ಲಿ ರೊಟ್ಟಿ ಮುರಿಯುವದು ಸಹಜವಾಗಿದ್ದರೂ, ಅದು ಹೊಸ ವಿಷಯವಾಗಿರಲಿಲ್ಲ. ಅಪೊಸ್ತಲರ ಕೃತ್ಯಗಳು 2:42ರಲ್ಲಿ ಈ ವಿಷಯವನ್ನು ನಮೂದಿಸಲಾಗಿದ್ದು, ಅದರ ಸಂಗಡ, ಆರಾಧನೆ ಯಲ್ಲಿರ ಬೇಕಾದ ಇತರೆ ಮೂರು ವಿಧವಾದ ಕ್ರಮಗ ಳನ್ನೂ ತಿಳಿಸಲಾಗಿದೆ, ಅವರು ಮಾಡಿದ ಭೋಜನ ಕರ್ತನ ಭೋಜನವೇ ಆಗಿತ್ತು (1 ಕೊರಿಂಥ 11:20-28).

ನಾಲ್ಕನೆಯದಾಗಿ, ಪರಿವರ್ತನೆಗೊಂಡವರು ಕ್ರೂಜೀತನಾದ ಯೇಸು ಕ್ರಿಸ್ತನ ಮೂಲಕ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದರು (1 ಥೆಸಲೋನಿಕ 5:17, 18). ಆತನನ್ನೇ ಕರ್ತನೆಂದು ಮತ್ತು ಕ್ರಿಸ್ತನೆಂದು ಅರಿತರು (ಅಪೊಸ್ತಲರ ಕೃತ್ಯಗಳು 2:36). ಮತ್ತು ಅವರ ಮಧ್ಯಸ್ತಗಾರನೂ, ಎಂದು ಅರಿತು ಕೊಂಡರು (1 ತಿಮೊಥೆ 2:5). ಅವರ ಇತಿಹಾಸದ ಹದಿನೈದು ಶತಮಾನಗಳಲ್ಲಿ, ಅಬ್ರಹಾಮನ ಸಂತತಿಯವರ್ಯಾರು ಸಹ ಮಧ್ಯವರ್ತಿಯಾದ ಯೇಸುವಿನ ಮುಖಾಂತರ ಪ್ರಾರ್ಥಿಸಲಿಲ್ಲ.

ಯೇಸು ಕ್ರಿಸ್ತನ ಹೆಸರಿನಲ್ಲಿ ದೇವರನ್ನು ಆರಾಧಿಸುವ ಇನ್ನೊಂದು ಉಪಕ್ರಮವನ್ನು ಈ ವಾಕ್ಯಭಾಗದಲ್ಲಿ ತಿಳಿಸಿರುವದಿಲ್ಲ: ಅದು ಸಂಗೀತದ ಆರಾಧನೆ. ಪೌಲ ಸೀಲರು ಸೆರೆ ಮನೆಯಲ್ಲಿದ್ದಾಗ, ದೇವರಿಗೆ ಸ್ತುತಿ ಪದಗಳನ್ನು ಹಾಡಿದರು (ಅಪೊಸ್ತಲರ ಕೃತ್ಯಗಳು 16:25). ಅಪೊಸ್ತಲರ ಆರಾಧನೆಯ ಕ್ರಮದಲ್ಲಿ ಸಂಗೀತವೂ ಸಹ ಒಳಗೊಂಡಿದೆ. ಕೊರಿಂಥ ಸಭೆಯಲ್ಲಿದ್ದ ಕೆಲವು ನ್ಯೂನತೆಗಳನ್ನು ಪೌಲನು ಸರಿಪಡಿಸುವಾಗ, ಆರಾಧನೆಯಲ್ಲಿನ ಕ್ರಿಯೆಗಳು ಕೇಳುವವರ ಹಿತಕ್ಕಾಗಿಯೂ ಹಾಗೂ ಸ್ಪಷ್ಟವಾಗಿಯೂ ಇರತಕ್ಕದ್ದು ಎಂದು ತಿಳಿಸಿರುವನು (1 ಕೊರಿಂಥ 14:15). ಹೊಸ ಒಡಂಬಡಿಕೆ ಕ್ರೈಸ್ತರು ಕಾಪೆಲ್ಲ ಸಂಗೀತವನ್ನೇ ಹಾಡಿದರು.

## ಹೊಸ ಆರಾಧನೆಯ ವಿವರಣೆ

**"ಅಪೊಸ್ತಲರ ಬೋಧನೆ"**

ಅಪೊಸ್ತಲರ ಬೋಧನೆಯು (ಅಪೊಸ್ತಲರ ಕೃತ್ಯಗಳು 2:42). ಧರ್ಮಶಾಸ್ತ್ರವನ್ನು ಮೀರಿಸಿತು. ಯೇಸು ತನ್ನ ಕುರಿತಾದ ಸಕಲ ಪ್ರವಾಧನೆಗಳು ಕಾರ್ಯರೂಪಕ್ಕೆ ಬಂದಿದ್ದವು ಎಂದು ತಿಳಿಸಿದನು; ಆದ್ದರಿಂದ ಧರ್ಮಶಾಸ್ತ್ರ ಮತ್ತು ಪ್ರವಾಧನೆಗಳು ಯಾವುದೇ ವಿಧವಾದ ಪ್ರಭಾವವನ್ನು ಬೀರಲಿಲ್ಲ (ಲೂಕ 24:44). ಸಾಧಾರಣವಾದ ಜನರು ಓದಿ ಅರಿತು ಕೊಳ್ಳತಕ್ಕ ಅಂತಿಮವಾದ ಹೊಸ ಪ್ರಕಟನೆಯನ್ನು ಅಪೊಸ್ತಲರು ಸ್ವೀಕರಿಸಿದ್ದರು (ಎಫೆಸ 3:3-5). ಈ ಪ್ರಕಟನೆಯು ದೇವರಿಂದಲೇ ಬಂದದ್ದರಿಂದ, ಅದು ಇನ್ನೊಂದು ಸುವಾರ್ತೆಯಾಗಿ ಮಾರ್ಪಡಲಿಲ್ಲ (ಗಲಾತ್ಯ 1:6-9). ಅದು ಪರಲೋಕದಿಂದ ಇಳಿದು ಬಂದ ಅಂತಿಮವಾದ "ಒಂದೇ" ಸಂದೇಶ, ರಕ್ಷಣೆ ಹೊಂದುವವರಿಗೆ ಅದು ಲಭಿಸಿತು (ಯೂದ 3).

ಹನ್ನೆರಡು ಜನ (ನಂತರದಲ್ಲಿ ಪೌಲನೂ ಸಹ) ಕ್ರಿಸ್ತನ ಅಧಿಕಾರದಿಂದ ಮಾತನಾಡಿದರು, ಯಾಕಂದರೆ ಅವರು ಪವಿತ್ರಾತ್ಮನಿಂದ ಪ್ರೇರಿತರಾಗಿದ್ದರು (ಯೋಹಾನ 14:25, 26; 15:26; 16:7, 8). "ಪ್ರೇರಣೆ" ಅಂದರೆ ಮಾನವನ ತಿಳುವಳಿಕೆಯನ್ನು ಮೀರಿದ ಭ್ರಮೆ ಅಥವಾ ಅಸಹಜವಾದ ಸಂಗತಿ ಎಂಬದಾಗಿರುವದಿಲ್ಲ. ಆದರೆ, ದೇವರಾತ್ಮನು ಈ ಪ್ರಸಂಗಿಗಳಲ್ಲೂ ಹಾಗೂ ಬರಹಗಾರರಲ್ಲೂ ಇದ್ದುಕೊಂಡು ಮಾಡಿದ ಕ್ರಿಯೆಗಳು ಎಂಬ ಅರ್ಥವಾಗಿದೆ. ದೇವರ ಆತ್ಮನು ಅವರನ್ನು ಪ್ರೇರಿಸಿ, ಅವರು ಏನನ್ನು ಬರೆಯಬೇಕೆಂದು ಸ್ಪಷ್ಟಪಡಿಸಿದನು. ಆತ್ಮನಾದ ದೇವರೇ ಅವರ ಮೇಲೆ ಪ್ರಭಾವವನ್ನು ಬೀರಿ, ಅವರು ಬರೆಯ ತಕ್ಕ ವಿಚಾರಗಳನ್ನು ಹೇಳಿ ಬರೆಸಿದನು. ಈ ಸತ್ಯಗಳನ್ನು ದೇವರೇ ಉಚ್ಚರಿಸಿ, ಅಪೊಸ್ತಲರಲ್ಲಿ ಇರಿಸಿ ಮತ್ತು ಇತರೆ ಹೊಸ ಒಡಂಬಡಿಕೆಯ ಬರಹಗಾರರು ಬರೆಯುವಂತೆ ಮಾಡಿದನು. ಆದುದರಿಂದ ಈ ಗ್ರಂಥಗಳು

“ದೇವರಿಂದ ಪ್ರೇರಿತವಾದವುಗಳಾಗಿವೆ” (2 ತಿಮೊಥೆ 3:16, 17). ಅಪೊಸ್ತಲರ ಈ ಬೋಧನೆಯು ಸ್ವಾಭಾವಿಕವಾಗಿರದೇ, ಧೈವೀಕವಾಗಿದ್ದವು (1 ಕೊರಿಂಥ 2:13).

ಈ ಹೊಸ ಸತ್ಯಗಳ ತಿಳುವಳಿಕೆಯ ಹಾಗೂ ಈ ವಾಕ್ಯಗಳು ಧರ್ಮಶಾಸ್ತ್ರದ ನಿಜವಾದ ಉದ್ದೇಶವನ್ನು ಎತ್ತಿ ತೋರಿಸುತ್ತವೆ: ಧರ್ಮಶಾಸ್ತ್ರವು ನಮ್ಮನ್ನು ಕಾಯುವ “ಆಳಿನಂತಿದೆ” ಅದು ಇಸ್ರಾಯೇಲ್ಯರನ್ನು ಕ್ರಿಸ್ತನೆಡೆಗೆ ಸೇರಿಸುತ್ತದೆ (ಗಲಾತ್ಯ 3:23-25). ಈಗ ಕ್ರಿಸ್ತನು ಬಂದಿರುವದರಿಂದ, “ನಂಬಿಕೆಯು” ಗೋಚರವಾಗಿ ಪೂರ್ಣಗೊಂಡಿದೆ, ಆದ್ದರಿಂದ ಧರ್ಮಶಾಸ್ತ್ರವು ಪ್ರಯೋಜನವಿಲ್ಲದ್ದಾಗಿದೆ. ಅದು ತನ್ನ ಉದ್ದೇಶವನ್ನು ಈಡೇರಿಸಿದೆ. ದೇವರ ರಕ್ಷಣಾ ಯೋಜನೆಯಲ್ಲಿ ಅದು ತನ್ನದೇ ಆದ ಸ್ಥಾನವನ್ನು ಹೊಂದಿದ್ದರೂ, ಅದು ಯೆಹೂದ್ಯರನ್ನು ಕ್ರಿಸ್ತನ ಕಡೆಗೆ ತೋರಿಸಿತು. ಆರಾಧನೆ ಮಾಡುವವರಿಗಾಗಿ, ಅಪೊಸ್ತಲರು ಹೊಸ ಬೋಧನೆಗಳನ್ನು ಬೋಧಿಸಿದರು, ಆದ್ದರಿಂದ ಅವರು ಗೌರವದಿಂದ ಮುಂದೆ ಸಾಗಬೇಕು.

“ಅಪೊಸ್ತಲರ ಬೋಧನೆ” ಎಂಬ ವ್ಯಾಖ್ಯಾನದಲ್ಲಿ, ಆಸಕ್ತಿಕರವಾದ ವ್ಯಾಕರಣದ ವಾಖ್ಯವನ್ನು ನಿರ್ಮಿಸಲಾಗಿದೆ. ಅದು 2 ಯೋಹಾನ 9, 10ರಲ್ಲಿರುವ “ಅನ್ಯೋನ್ಯತೆ” ಎಂಬ ವಿಚಾರಕ್ಕೆ ಸಂಬಂಧಿಸಿರುವ ಹೋಲಿಕೆಯಾಗಿದೆ:

> ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು ಈ ಉಪದೇಶಕ್ಕೆ ಒಪ್ಪದಿರುವ ಯಾವನಾದೂ ನಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಯಾರಾದರೂ ಕ್ರಿಸ್ತನ ವಾಕ್ಯಕ್ಕೆ ಒಡಂಬಡಿಕೆ ದೂರ ಹೋಗುವದಾದರೆ, ಅಂಥವನು ದೇವರನ್ನು ಹೊಂದಿರುವದಿಲ್ಲ; ಒಬ್ಬನು ಈ ಬೋಧನೆಗೆ ಒಳಪಟ್ಟರೆ, ಅವನು ತಂದೆಯನ್ನೂ ಮಗನನ್ನೂ ಹೊಂದಿರುವನು. ಒಬ್ಬನು ನಿಮ್ಮ ಬಳಿಗೆ ಈ ಬೋಧನೆಯಿಂದ ಬಾರದೆ ಹೋದರೆ, ಅವನನ್ನು ಮನೆಗೆ ಅಹ್ವಾನಿಸದಿರ್ರಿ ಹಾಗೂ ವಂದಿಸಲೂ ಬೇಡಿರಿ.

“ಕ್ರಿಸ್ತನ ಬೋಧನೆ” ಕುರಿತ ಇಲ್ಲಿ ಒಂದು ಹೇಳಿಕೆಯಿದೆ. ಗ್ರೀಕ್ ಭಾಷೆಯಲ್ಲಿ ಎರಡು ಹೇಳಿಕೆಗಳೂ ಸಮನಾಗಿವೆ. “ಕ್ರಿಸ್ತನ ಬೋಧನೆ” ಕುರಿತು ವ್ಯತ್ಯಾಸ ಹೊಂದಿರುವವರು, ಅದನ್ನು ಕ್ರಿಸ್ತನ ಸಿದ್ದಾಂಥವೆಂದಾಗಲೀ, ಅಥವಾ ಕ್ರಿಸ್ತನು ಬೋಧಿಸಿದ ಸಿದ್ದಾಂತ ಎಂದು ಅರ್ಥೈಸಿಕೊಳ್ಳಬಹುದು. ಅದನ್ನು ಯೇಸುವಿನ ಕುರಿತ ಸಿದ್ಧಾಂತ ಎಂದು ತಿಳಿಯುವುದಾದರೆ, ಆಗ ಆತನನ್ನು ದೇವರ ಮಗನೆಂದು ಒಪ್ಪಿಕೊಳ್ಳುವವರ ಸಂಗಡ ಅನ್ಯೋನ್ಯತೆಯನ್ನು ಹೊಂದಬಹುದು. ಒಂದು ವೇಳೆ ಅವರುಗಳು ಕೆಲವು ಸಂಸ್ಥೆಗಳ ಸದಸ್ಯರಾಗಿದ್ದರೂ ಮತ್ತು ಅದರ ಆಚರಣೆಗಳನ್ನು ಮಾಡುವದಾದರೂ ಅನ್ಯೋನ್ಯತೆಯನ್ನು ಹೊಂದಬಹುದು, ಒಂದು ವೇಳೆ ಅವರುಗಳು ಕೆಲವು ಸಂಸ್ಥೆಗಳ ಸದಸ್ಯರಾಗಿದ್ದರೂ ಮತ್ತು ಅದರ ಆಚರಣೆಗಳನ್ನು ಮಾಡುವದಾದರೂ, ಅನ್ಯೋನ್ಯತೆಯನ್ನು ಹೊಂದಬಹುದು.

ಒಂದು ವೇಳೆ, ಕ್ರಿಸ್ತನಿಂದ ಹಾಗೂ ಅಪೊಸ್ತಲರಿಂದ ಬೋಧಿಸಲ್ಪಟ್ಟಿತು ಎಂದು ಅರ್ಥ ಮಾಡಿಕೊಳ್ಳುವದಾದರೆ, ಹೊಸ ಒಡಂಬಡಿಕೆಯ ಬೋಧನೆಗಳಿಗೆ ಒಳಪಟ್ಟಿರುವವರೊಂದಿಗೆ ಮಾತ್ರ ಅನ್ಯೋನ್ಯತೆಯನ್ನು ಹೊಂದುವದು ಯೋಗ್ಯವಾಗಿದೆ. ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡಿರುವವರು ಅಲಕ್ಷದ ಅನ್ಯೋನ್ಯತೆಯನ್ನು ಹೊಂದಲು ಸಾಧ್ಯವಿದೆ; ಆದರೆ ಅಪೊಸ್ತಲರ ಬೋಧನೆಯನ್ನು ಪಾಲಿಸುವವರು ವಿಶಿಷ್ಟವಾದ ಅನ್ಯೋನ್ಯತೆಯನ್ನು ಹೊಂದಲು ಸಾಧ್ಯವಿದೆ.

ಈ ಹೇಳಿಕೆಯಲ್ಲಿ ವ್ಯಾಕರಣದ ವಾಖ್ಯವು ಹೊಂದಾಣಿಕೆ ಇರುವದರಿಂದ, ಅಪೊಸ್ತಲರ

ಕೃತ್ಯಗಳು 2:42ನ್ನು “ಅಪೊಸ್ತಲರು ಮಾಡಿದ ಬೋದನೆ ಎಂದು” ಅನು ವಾದಿಸಬಹುದೇ ವಿನಃ “ಅಪೊಸ್ತಲರ ಕುರಿತ ಬೋಧನೆ” ಎಂದಿರುವದಿಲ್ಲ. ಅದೇ ವಿಧವಾಗಿ, 2 ಯೋಹಾನ 9ನ್ನು “ಕ್ರಿಸ್ತನ ಬೋಧನೆ” ಎಂದು ಅನುವಾದಿಸಬಹುದು. ಯೋಹಾನನ ಈ ಬೋಧನೆ ಯಲ್ಲಿ, ಪರಿಮಿತಿಗೆ ಒಳಪಟ್ಟ ಅನ್ಯೋನ್ಯತೆ ಎಂದು ತಿಳಿಯಬಹುದೇ ವಿನಃ ಯೇಸುವನ್ನು ಕ್ರಿಸ್ತನೆಂದು ಒಪ್ಪಿರುವ ಪಂಗಡಗಳಲ್ಲಿನ ಅನ್ಯೋನ್ಯತೆಯೆಂದು ಅರ್ಥ ನೀಡುವದಿಲ್ಲ. ಕರ್ತನಿಂದ ಸನ್ನಹಿತವಾಗಿರುವರ ಅನ್ಯೋನ್ಯತೆಯನ್ನು ಮುರಿಯಲು ಯತ್ನಿಸುವವರು, ಅದರ ಸತ್ಯಾರ್ಥವನ್ನು ಅರಿಯಲು ಅಸಾಧ್ಯವಾಗುತ್ತದೆ.

**“ಅನ್ಯೋನ್ಯತೆ”**

ಪರಿವರ್ತನಗೊಂಡ ಯೆಹೂದ್ಯರು ಅನ್ಯೋನ್ಯತೆ ಎಂಬ ಬದಲಾವಣೆಯನ್ನು ಹೊಂದಿದರು. ತಮ್ಮ ಸ್ವಾಸ್ತ್ಯದ ಹಾಗೂ ಇತರರ ಕೊರತೆಗಳ ಬಗೆಗಿನ ದೃಷ್ಟಿಕೋನವನ್ನು ಬದಲಾಯಿಸಿಕೊಂಡರು. “ಕೊಯಿನೋನಿಯಾ” ಎಂದರೆ, ಧಾರ್ಮಿಕ ಅವಕಾಶಗಳಿಗೆ ಸಹೋದರರೆಲ್ಲರು ಪಾಲುಗಾರರಾಗುವದು ಎಂಬ ತೆರೆದ ಅರ್ಥವಾಗಿದೆ. ತಂದೆ, ಮಗ ಹಾಗೂ ಪವಿತ್ರಾತ್ಮನ ಸಂಗಡದ ಅನ್ಯೊನ್ಯತೆ ಎಂಬ ಇನ್ನೊಂದು ಅರ್ಥವನ್ನು ನೀಡುತ್ತದೆ (2 ಕೊರಿಂಥ 13:14); ಹಾಗೂ ಪರಸ್ಪರ ಕ್ರೈಸ್ತರೊಂದಿಗಿನ ಅನ್ಯೋನ್ಯತೆ ಎಂದಿರುತ್ತದೆ (1 ಯೋಹಾನ 1:7); ಹಾಗೂ ಕರ್ತನ ಭೋಜನದಲ್ಲೂ ಹಾಗೂ ಕರ್ತನು ಕ್ರೂಜೆಯಲ್ಲಿ ಸುರಿಸಿದ ರಕ್ತದಲ್ಲೂ ಒಬ್ಬ ಕ್ರೈಸ್ತನು ಹೊಂದುವ ಅನ್ಯೋನ್ಯತೆಯಾಗಿರುತ್ತದೆ (1 ಕೊರಿಂಥ 10:16).

ಲೋಕದ ಸ್ವಾಸ್ತ್ಯವನ್ನು ಪರಸ್ಪರ ಹಂಚಿಕೊಳ್ಳುವ ವಿಷಯಕ್ಕೆ “ಕೊಯಿನೋನಿಯಾ” ಎಂದು ಕರೆಯುವರು (ರೋಮಾಪುರ 15:26; 2 ಕೊರಿಂಥ 9:13). ಪಾಲಿಸ್ತೇನಿಯರು, ರೋಮಾಯದವರಿಗೆ ಸುವಾರ್ತೆಯನ್ನು ಸಾರಿದ್ದರಿಂದ, ಅದಕ್ಕೆ ಪ್ರತಿಯಾಗಿ ರೋಮಾಯರು ತಮ್ಮ ಲೌಕೀಕ ಆಶೀರ್ವಾದವನ್ನು ಕೊರತೆವುಳ್ಳ ಪಾಲಿಸ್ತೇನಿಯರೊಂದಿಗೆ ಹಂಚಿಕೊಳ್ಳುವದು ಯೋಗ್ಯವಾಗಿತ್ತು. ಫಿಲಿಪ್ಪಿಯ ಕ್ರೈಸ್ತರು ಪೌಲನಿಗೆ ಸಹಾಯ ನೀಡಿದ್ದರಲ್ಲಿ ನಂಬಿಗಸ್ತರಾಗಿದ್ದರು ಎಂದು ಪೌಲನು ನೆನಪು ಮಾಡಿರುವದು (ಫಿಲಿಪ್ಪಿ 1:5; 4:14-16).

ಅಪೊಸ್ತಲರ ಕೃತ್ಯಗಳು 2ರ, ಹಿನ್ನೆಲೆಯಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಪರಿವರ್ತನೆಗೊಂಡ ಯೆಹೂದ್ಯರ ಧೈಹೀಕ ಕೊರತೆಗಳನ್ನು ನೀಗಿಸುವ ವಿಚಾರಕ್ಕೆ “ಅನ್ಯೋನ್ಯತೆ” ಎನ್ನಲಾಗಿದೆ. ಏಕೆಂದರೆ ಅವರು ಸುವಾರ್ತೆಯನ್ನು ಕಲಿಯುವದ ಕೋಸ್ಕರ ಯೆರೂಸಲೇಮಿನಲ್ಲೇ ತಂಗುವವರಾಗಿದ್ದರು. ಇತಿಹಾಸಕಾರರ ದಾಖಲೆಯ ಪ್ರಕಾರ ಅನೇಕ ಕುಟುಂಬಗಳು, ಅನೇಕ ದಿವಸಗಳ ಕಾಲ ಯೆರೂಸಲೇಮಿನಲ್ಲೇ ತಂಗಿದ್ದರಿಂದ ಅವರು ತಮ್ಮ ಮನೆಗಳಿಗೆ ಹಿಂದಿರುಗಲು ಸಹ ಆಹಾರ ಮತ್ತು ಆರ್ಥಿಕ ಕೊರತೆಗಳನ್ನು ನೀಗಿಸಬೇಕಿತ್ತು.

ಈ ವಿಧವಾದ ಕರ್ತನ ಕೆಲಸಕ್ಕೆ ಅವರು ದಶಮಾಂಶವನ್ನು ಸಂಗ್ರಹಿಸಲಿಲ್ಲ ಎಂಬ ವಿಷಯವನ್ನು ವಿಶೇಷವಾಗಿ ಗಮನಿಸಬೇಕು! ಧರ್ಮಶಾಸ್ತ್ರವು ದೊರಕುವ ಮೊದಲೇ, ಅಬ್ರಹಾಮನು ಮೆಲ್ಲೇಜೆದಕನಿಗೆ ಹತ್ತರಲ್ಲಿ ಒಂದು ಅಂಶವನ್ನು ನೀಡಿದನು ಎಂಬುದನ್ನು ಸಹ ಗಮನಿಸಬೇಕು (ಇಬ್ರಿಯ 7:1-4). ಕ್ರಿಸ್ತನ ಬೋಧನೆಗಳಲ್ಲಿ ದಶಮಾಂಶದ ಕುರಿತಾಗಿ ಇಲ್ಲದೆ ಇರುವದರಿಂದ, ಕೊಡುವ ವಿಷಯದಲ್ಲಿ ಬದಲಾದ ಕ್ರಮವನ್ನು ಗಮನಿಸಬೇಕು. ಹೊಸ ಅಪ್ಪಣೆಯ ಪ್ರಕಾರ ಪ್ರತಿಯೊಬ್ಬನು ತನ್ನ ಸಂಪಾದನೆಯ ಮೇರೆಗೆ ನೀಡಬೇಕು (1 ಕೊರಿಂಥ 16:2). ಸಮೃದ್ಧಿಯ ಪ್ರಕಾರ ನೀಡಬೇಕು (2 ಕೊರಿಂಥ 8:14, 15). ಕಾಣಿಕೆಗಳನ್ನು ಉದಾರವಾಗಿ, ಉದ್ದೇಶದ ನಿಮಿತ್ತ ಹಾಗೂ ಸಂತೋಷವಾಗಿ ನೀಡಬೇಕು (2 ಕೊರಿಂಥ 9:6, 7).

**“ರೊಟ್ಟಿ ಮುರಿಯುವದು”**

ಆರಾಧನೆಯ ಕ್ರಮದಲ್ಲಿ ರೊಟ್ಟಿ ಮುರಿಯುವದು ಸಹ ಒಂದು ಪ್ರೇರಿತವಾದ ಬದಲಾವಣೆಯಾಗಿತ್ತು, ಕ್ರಿಸ್ತನ ಶಿಲುಬೆ ಮತ್ತು ಮರಣವನ್ನು ನೆನಪು ಮಾಡಿಕೊಳ್ಳುವ ಕಾರ್ಯವಾಗಿತ್ತು (1 ಕೊರಿಂಥ 11:26), ಮತ್ತು ಆತನು ಹಿಡಿಯಲ್ಪಟ್ಟ ರಾತ್ರಿಯಲ್ಲಿ ಆತನು ತನ್ನ ಶಿಷ್ಯರಿಗೆ ನೀಡಿದ ಅಪ್ಪಣೆಯ ಮೇರೆಗೆ ಇದನ್ನು ಮಾಡಲಾಯಿತು (ಮತ್ತಾಯ 26:26-29; ಲೂಕ 22:17-20). ಇದರ ನೆನಪಿನಾರ್ಥವಾಗಿ ದೇವರ ರಾಜ್ಯದಲ್ಲಿ ಈ ಕಾರ್ಯವನ್ನು ಮಾಡಬೇಕಿತ್ತು, ಈ ಭೋಜನದಲ್ಲಿ ಕರ್ತನು ತಾನೇ ಇಳಿದು ಬಂದು ನಂಬಿಗಸ್ತರಾದ ಕ್ರೈಸ್ತರ ಸಂಗಡ ಅನ್ಯೋನ್ಯತೆಯಲ್ಲಿ ಇರುವವನಾಗಿದ್ದನು (ಲೂಕ 22:29, 30) ಇದನ್ನು ಕರ್ತನ ಸಭೆಗಳಲ್ಲಿ ಮಾತ್ರ ಆಚರಿಸುತ್ತಿದ್ದರೇ ವಿನಃ (1 ಕೊರಿಂಥ 10:16) ಇದು ಸಹಜವಾದ ಊಟದ ವ್ಯವಸ್ಥೆಯಾಗಿರಲಿಲ್ಲ (1 ಕೊರಿಂಥ 11:20-22, 33, 34).

ಲೋಕದ ಪಾಪಕ್ಕಾಗಿ ಯೇಸು ತನ್ನ ದೇಹವನ್ನು ಹಾಗೂ ರಕ್ತವನ್ನು ನೀಡಿದನು ಎಂಬ ನೆನಪು ಈ ಭೋಜನದಲ್ಲಿ ಉಂಟಾಗುತ್ತದೆ. ಹೊಸ ಒಡಂಬಡಿಕೆಯ ಕ್ರೈಸ್ತರು ವಾರದ ಮೊದಲನೆಯ ದಿನವಾದ ಭಾನುವಾರದಂದು ಈ ಆಚರಣೆಯನ್ನು ಮಾಡಿದರು (ಅಪೊಸ್ತಲರ ಕೃತ್ಯಗಳು 20:7). ಭಾನುವಾರದಂದೇ ಆರಾಧನೆಗೆ ಸೇರಿ ಬರುವದು ಆದಿ ಕ್ರೈಸ್ತರ ಆಚರಣೆಯಾಗಿತ್ತು. ಹಣ ಸಂಗ್ರಹಣೆಯ ಕುರಿತು ಪೌಲನು ಸೂಚನೆಗಳನ್ನು ನೀಡುವಾಗ, ಈಗಾಗಲೇ ಅವರಿಗೆ ರೂಢಿಯಾಗಿದ್ದ ದಿನದಲ್ಲೆ ಸಂಗ್ರಹಿಸಬೇಕಿತ್ತು (1 ಕೊರಿಂಥ 16:2). ವಾರದ ಮೊದಲನೆಯ ದಿನವೇ ಮಾಡಬೇಕೆಂಬ ನಿಯಮವನ್ನು ಪೌಲನು ತಿಳಿಸದೆ, ಅವರು ಈಗಾಗಲೇ ರೂಢಿಯಾಗಿ ಸೇರು ಬರುತ್ತಿದ ವಾರದ ಮೊದಲನೆಯ ದಿನದಲ್ಲಿ ಮಾಡಬೇಕೆಂದು ತಿಳಿಸಿದನು.

ವಾರದ ಮೊದಲನೆಯ ದಿನದ ಕೂಡಿ ಬರುವಿಕೆಯು, ಬಹಳ ಗುರುತರವಾದ ವಿಚಾರವಾಗಿತ್ತು ಧರ್ಮಶಾಸ್ತ್ರದ ಪ್ರಕಾರ ಏಳನೆಯ ದಿವಸವಾದ, ಸಬ್ಬತ್ ದಿನದಲ್ಲಿ ಅವರು ಕೂಡಿಬರುತ್ತಿದ್ದರು. ಪರಿವರ್ತನೆಗೊಂಡ ಯೆಹೂದ್ಯರು, ಭಾನುವಾರದ ದಿವಸ ವಿಶೇಷವಾದ ಸಭೆಯನ್ನು ನಡೆಸುತ್ತಿದ್ದರು. “ಯೇಸುವಿನ ಬೋಧನೆಗಳೆಲ್ಲ ವನ್ನು” ಪರಿವರ್ತನೆಗೊಂಡವರಿಗೆ ಉಪದೇಶಿಸಬೇಕೆಂಬ ಅಪ್ಪಣೆಯನ್ನು ಶಿಷ್ಯರು ಹೊಂದಿದ್ದರು (ಮತ್ತಾಯ 28:20). ಆ ಹೊಸದಾದ ಜನರು ಕರ್ತನ ಗೌರವಕ್ಕಾಗಿ ವಾರದ ಮೊದಲನೆಯ ದಿನದಲ್ಲಿ ಸೇರಿ ಬರಬೇಕೆಂದು ಅಪೊಸ್ತಲರು ಬೋಧಿಸಿದ್ದರೆ ಅದು ಯೇಸು ಕ್ರಿಸ್ತನ ಆ ದೇಶದ ನೇರವಾದ ಪರಿಣಾಮವಾಗಿತ್ತು. ಕರ್ತನನ್ನು ಆರಾಧಿಸುವದಕ್ಕೆ ವಾರದ ಮೊದಲನೆಯ ದಿನವೇ ಯೋಗ್ಯ ವಾದದ್ದೆಂದು ಒಬ್ಬ ಸತ್ಯವೇದದ ವಿದ್ಯಾರ್ಥಿಯು ನಿರ್ಣಯಿಸಲು ಈ ನಿದರ್ಶನವು ಬಲವಾದ ಕಾರಣವಾಗಿದೆ, ಅದರಲ್ಲಿ ಕರ್ತನ ಭೋಜನವು ಸಹ ಒಳಗೊಂಡಿರುತ್ತದೆ, ಇದು ಕರ್ತನ ಅಪ್ಪಣೆಯ ಕ್ರಮವಾಗಿರುತ್ತದೆ. ಅಪೊಸ್ತಲರು ಯೇಸು ಅಪ್ಪಣೆ ಮಾಡಿದ್ದನ್ನು ಬೋಧಿ ಸಿದ್ದರಿಂದ ಪರಿವರ್ತನೆಗೊಂಡವರು ಅಪೊಸ್ತಲರ ಬೋಧನೆಗಳನ್ನೇ ಪಾಲಿಸುತ್ತಾ ಮುಂದುವರಿದರು.

**“ಪ್ರಾರ್ಥನೆ”**

ಈ ವಿಧದ ಪ್ರಗತಿ ಪರ ಬದಲಾವಣೆಗಳಲ್ಲಿ, ಪ್ರಾರ್ಥನೆಗಳಲ್ಲಿ ಬದಲಾವಣೆಗಳು ಉಂಟಾಗಿ ವಿಶೇಷವಾದ ಪ್ರಾರ್ಥನೆಯನ್ನು ಸಮರ್ಪಿಸಲಾಯಿತು. ಪಂಚಾಶತ್ತಮದ ಹಿಂದಿನ ಸಮಯಗಳಲ್ಲಿ, ಪರಿವರ್ತನೆಗೊಂಡ ಇವರು ಯೆಹೋವ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು; ಆದರೆ ಈಗ, ಯೆಹೋವ ದೇವರನ್ನು ಮಧ್ಯವರ್ತಿಯಾದ ಯೇಸು ಕ್ರಿಸ್ತನ ಮುಖಾಂತರ ಪ್ರಾರ್ಥಿಸಲು ಆರಂಭಿಸಿದರು (ಕೊಲೊಸ್ಸೆ 3:17; ರೋಮಾಪುರ 1:8, 9; 1 ತಿಮೊಥೆ 2:5). ಈ ಹಿಂದೆ, ಪರಿವರ್ತನೆಗೊಂಡ ಇವರು ತಂದೆಯನ್ನು ಗೌರವವಾಗಿ ಕರೆಯುತ್ತಿದ್ದರು; ಈ ಯೇಸುವಿನ ಮುಖಾಂತರ ತಂದೆಯಲ್ಲಿ ಪ್ರಾರ್ಥಿಸಿದರು, ಅದೇ ಗೌರವದಿಂದ ತಂದೆಯನ್ನು

ಸನ್ಮಾನಿಸಿದರು.

"ಅಪೊಸ್ತಲರ ಬೋಧನೆ," "ಅನ್ಯೋನ್ಯತೆ," "ರೊಟ್ಟಿ ಮುರಿಯುವದು," ಪ್ರಾರ್ಥನೆಗಳು ಅಪೊಸ್ತಲರ ಕೃತ್ಯಗಳು 2ರ ಪಂಚಾಶತ್ತಮ ದಿನದಂದು ಸಾರಿದ ಸುವಾರ್ತೆಯ ಪರಿಣಾಮ ವಾಗಿ ಬದಲಾದ ಸಂಗತಿಗಳಾಗಿವೆ.

## ಒಂದು ಹೊಸ ಆರಾಧನೆಯ ಅನುಭವ

ಯೋಹಾನ 4:21-24ರಲ್ಲಿ, ಸಮಾರ್ಯದ ಸ್ತ್ರೀಗೆ ಯೇಸು ವಾಗ್ದಾನಮಾಡಿ, ಸತ್ಯವಾಗಿ ಆರಾಧಿಸುವವರು ಯೆರೂಸಲೇಮಿಗಾಗಲೀ ಅಥವಾ ಬೆಟ್ಟಕ್ಕಾಗಲೀ ಹೋಗಿ ಆರಾಧಿಸದೆ, "ಸತ್ಯ ಮತ್ತು ಆತ್ಮನನ್ನು ಅವಲಂಭಿಸಿ" ಆರಾಧಿಸಬೇಕೆಂದನು. ರಾಜ್ಯವು ಇಬ್ಭಾಗವಾದಾಗ ಸಮಾರ್ಯದ ಮೂಲದವರು ದಂಗೆ ಎದ್ದು ಯೆರೋಬಾಮನನ್ನು ಹಿಂಬಾಲಿಸಿದವರಾಗಿದರು (1 ಅರಸು 12; 13). ಅಬ್ರಹಾಮನ ಸಂತಾನದವರಾದ ಸಮಾರ್ಯರು ಯೆರೂಸಲೇಮಿಗೆ ಹೋಗದೆ, ಸಮಾರ್ಯದ ಗುಡ್ಡಗಳಲ್ಲೇ ಆರಾಧಿಸಬಹುದೆಂದು ತಿಳಿದಿದ್ದರು. ನಂಬಿಗಸ್ಥರಾದ ಇಸ್ರಾಯೇಲ್ಯರು ಯೆರೂಸಲೇಮಿನಲ್ಲಿಯೇ ಪಸ್ಕ ಹಬ್ಬವನ್ನು ಆಚರಿಸುತ್ತಿದ್ದರು, ಆದರೆ ಜನರು ಯೆರೂಸಲೇಮಿಗೆ ಹೋಗಿ ರೆಹಾಬಾಮನಿಗೆ ಹಿಂದಿರುಗದಂತೆ, ಯೆರೋಬಾಮನು ತಾನಿರುವ ಸ್ಥಳದಲ್ಲಿಯೇ ಪಸ್ಕ ಹಬ್ಬವನ್ನು ಜನರು ಆಚರಿಸುವಂತೆ ಅವಕಾಶ ಮಾಡಿಕೊಟ್ಟನು (1 ಅರಸು 12:26-33).

ಯೇಸು ಸಮಾರ್ಯದ ಸ್ತ್ರೀಯೊಂದಿಗೆ ಮಾತನಾಡುವಾಗ, ಹಳೆಯ ಸಂಪ್ರದಾಯ ಗಳನ್ನು ಅಲಕ್ಷಮಾಡಿ, ದೇವರ ಆರಾಧನೆಯಲ್ಲಿ ಬೇಗನೆ ಬದಲಾವಣೆಯು ಉಂಟಾಗುವದೆಂದು ಪ್ರಕಟಿಸಿದನು, ಆ ಆರಾಧನೆಯು, ಆತ್ಮ ಮತ್ತು ಸತ್ಯದಿಂದ ಜರುಗುವದು ಎಂದು ಹೇಳಿ ದನು. "ಆತ್ಮದಲ್ಲಿ" ಅಂದರೆ ಆರಾಧನೆ ಮಾಡುವವನ ಉದ್ದೇಶ ಹಾಗೂ ಮನೋಭಾವ ಎಂಬುದಾಗಿರುತ್ತದೆ. "ಸತ್ಯದಲ್ಲಿ" ಆರಾಧಿಸುವದು ಅಂದರೆ, ಆರಾಧಿಸುವವನ ಸತ್ಯಕ್ಕೆ ಹೊಂದುವ ವರ್ತನೆ ಎಂಬದೆ. ಸಂಪ್ರದಾಯಿಕವಾದ ಆರಾಧನೆಯು ಸ್ವೀಕಾರಗೊಳ್ಳುವದಿಲ್ಲ. ದೇವರಿಂದ ಹೊಂದದ ಪ್ರಾಯೋಗಿಕ ಕಾರ್ಯಗಳಿಂದ ಸಮರ್ಪಿಸುವ ಆರಾಧನೆಯು ಸಹ ಊರ್ಜಿತಗೊಳ್ಳುವದಿಲ್ಲ.

ಎರಡನೆಯದಾಗಿ, ಸತ್ಯವಾದ ಆರಾಧನೆಯು ಉದ್ದೇಶ ಪೂರ್ವಕವಾಗಿರುತ್ತದೆ. ಮನಸ್ಸಿನಲ್ಲಿ ಉದ್ದೇಶ ಹೊಂದಿದವರಾಗಿ ಆರಾಧಿಸುವದು. ಆರಾಧನೆಯನ್ನು ಆಕಸ್ಮಿಕವಾಗಿ ಮಾಡಲು ಸಾಧ್ಯವಿಲ್ಲ. ಧೈಹೀಕವಾದ ಉದ್ದೇಶವು ಆರಾಧನೆಯಾಗುವದಿಲ್ಲ; ಆರಾಧನೆ ಮಾಡುವವನು, ಪೂರ್ಣ ಹೃದಯದಿಂದ ಆರಾಧಿಸಬೇಕು.

ಮೂರನೆಯದಾಗಿ, ಸತ್ಯವಾದ ಆರಾಧನೆಯ ನೇರವಾಗಿರುತ್ತದೆ. ಆರಾಧನೆಯು ಇತರರನ್ನು ಅವಲಂಭಿಸಿರುವದಿಲ್ಲ. ಸತ್ಯವಾದ ಆರಾಧನೆಯು ದೇವರ ಸ್ತುತಿ ಮತ್ತು ಮಹಿಮೆಗಾಗಿ ಮಾತ್ರ ಸೀಮಿತವಾಗಿರುತ್ತದೆ, ಅದನ್ನು ಇತರರ ಮೆಚ್ಚುಗೆಗಾಗಿ ಮಾಡಬಾರದು. ಇತರರ ಮೆಚ್ಚುಗೆಗಾಗಿ ವರ್ತಿಸುವದು, ಆರಾಧನೆಯಾಗುವದಿಲ್ಲ. ಇತರರ ಲಾಭಕ್ಕಾಗಿ ಆರಾಧಿಸುವದು ಆರಾಧನೆಯಾಗುವದಿಲ್ಲ. ಆರಾಧನೆಯಲ್ಲಿ ಈ ವಿಚಾರಗಳಿಗೆ ಸ್ಥಾನವಿರುವದಿಲ್ಲ. ಒಬ್ಬನು ಬೋಧಿಸುತ್ತಾ ಅಥವಾ ಹಾಡುತ್ತಾ ಇರುವಾಗ, ಇತರರಿಂದ ಅಲ್ಪ ಲಾಭವು ಉಂಟಾಗಬಹುದಾದರು, ಒಬ್ಬ ಕ್ರೈಸ್ತನು ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ (ಕೊಲೊಸ್ಸೆ 3:16; ಎಫೆಸ 5:19). ದೇವರು ಮಾತ್ರ ಆರಾಧನೆಯನ್ನು ಸ್ವೀಕರಿಸಲು ಅರ್ಹನಾಗಿದ್ದಾನೆ.

ನಾಲ್ಕನೆಯದಾಗಿ, ಸತ್ಯವಾದ ಆರಾಧನೆಯು, ಅಲ್ಪ ಕಾಲಿಕವಾಗಿರುತ್ತದೆ. ದೇವರ ಇಚ್ಛೆಗನುಗುಣವಾಗಿ ನಮ್ಮ ವರ್ತನೆಯು ಇರುತ್ತದೆ. ದೇವರನ್ನು ಎಲ್ಲಿಯಾದರೂ, ಯಾವ

ಸಮಯದಲ್ಲಾದರೂ ಒಬ್ಬನು ಆರಾಧಿಸಬಹುದು. ಅಪೊಸ್ತಲರ ಕೃತ್ಯದಲ್ಲಿ ಆರಾಧನೆ ಮತ್ತು ಹಾಡುಗಳನ್ನು ವಿವಿಧವಾದ ಸಂದರ್ಭದಲ್ಲಿ ಪ್ರಾಯೋಜಿಸಿದರು, ಬಹಿರಂಗವಾಗಿಯೂ, ಖಾಸಗಿಯಾಗಿಯೂ ಮಾಡಿದರು, ಅದು ಒಬ್ಬನ ಆತ್ಮದ ಉದ್ದೇಶಕ್ಕೆ ಒಳಪಟ್ಟಿತ್ತು. ಆರಾಧನೆಯು ಅಲ್ಪಕಾಲಿಕವಾಗಿದ್ದರಿಂದ, ದೇವರ ವಾಕ್ಯದ ಮಾರ್ಗ ದರ್ಶನದಂತೆ, ಒಬ್ಬನು ತನ್ನ ವರ್ತನೆಯನ್ನು ಅಳವಡಿಸಿಕೊಳ್ಳಬೇಕು.

ಸತ್ಯದ ಆರಾಧನೆಯು ವ್ಯರ್ಥವಲ್ಲ (ಮಾರ್ಕ 7:7). ಅದು ಅಸಡ್ಡೆಗೆ ಒಳಪಡಬಾರದು (ಅಪೊಸ್ತರ ಕೃತ್ಯಗಳು 17:23). ಅದು ಮನುಷ್ಯನ ಚಿತ್ತ ಮತ್ತು ನಿರ್ಣಯದಂತೆ ನಡೆಯಬಾರದು (ಕೊಲೊಸ್ಸೆ 2:20-23).

## ಮುಕ್ತಾಯ

ಆರಾಧನೆಯು, ಪ್ರತಿಸ್ಥಳದಲ್ಲಿರುವ ಪ್ರತಿಯೊಬ್ಬನಿಗೂ ದೊರೆತಿರುವ ಅವಕಾಶವಾಗಿದೆ. ಅದು ಯಾವುದೇ ಭೂಗೋಳಿಕ ಸ್ಥಳಕ್ಕೂ ಹಾಗೂ ಯಾವುದೇ ಯಾಜಕ ವರ್ಗದವರಿಗೂ ಸೀಮಿತವಾಗಿರುವದಿಲ್ಲ. ದೇವರು ಮೆಚ್ಚುವಂಥ ಆರಾಧನೆಯನ್ನು ಸಲ್ಲಿಸಲು, ಪ್ರತಿ ಕ್ರೈಸ್ತರು ಯಾಜಕರಾಗಿ ನೇಮಕಗೊಂಡಿರುವರು (1 ಪೇತ್ರ 2:5, 9-11). ಹೇಗೂ ಆರಾಧನ ಕ್ರಮಗಳನ್ನು (ಕರ್ತನ ಭೋಜನ, ಪ್ರಾರ್ಥನೆ, ಹಾಡು, ಬೋಧನೆ, ಹಾಗೂ ಕಾಣಿಕೆ) ಸಭೆಯ ದೇವ ಜನರು ಮಾತ್ರ ಮಾಡಬೇಕಾಗಿದ್ದರೂ, ಇದನ್ನು ಇತರೆ ಸ್ಥಳಗಳಲ್ಲೂ ಇತರೆ ಸಮಯದಲ್ಲೂ ಮಾಡಬಹುದಾಗಿದೆ. ಆದರೆ, ವಾರದ ಮೊದಲನೆಯ ದಿನದಲ್ಲಿ ಮಾತ್ರ ರೊಟ್ಟಿ ಮುರಿಯಬೇಕು. ಆದ್ದರಿಂದ ವಾರದ ಇತರೆ ದಿನಗಳಲ್ಲಿ ರೊಟ್ಟಿ ಮುರಿಯುವದು ಸನ್ನಿಹಿತವಾಗಿರುವದಿಲ್ಲ ಎಂಬುದನ್ನು ನಿರ್ಣಯಿಸಬಹುದು. ಕರ್ತನು ವಾರದ ಇತರೆ ದಿನಗಳಲ್ಲಿ ಎದ್ದು ಬಾರದೆ ಇರುವವದರಿಂದ ವಾರದ ಮೊದಲನೆಯ ದಿನದಲ್ಲಿ, ಆತನ ನೆನಪಿನಾರ್ಥವಾಗಿ ರೊಟ್ಟಿ ಮುರಿಯಬೇಕು.

ಕರ್ತನ ದಿನವು ನೆನಪಿನ ಹಾಗೂ ಕೃತಜ್ಞತೆಯ ದಿನವಾಗಿರುತ್ತದೆ (ಪ್ರಕಟನೆ 1:10). ದೇವರು ನಮಗಾಗಿ ನೀಡಿರುವ ಪಾಪಕ್ಷಮೆಯನ್ನು ವಾರದ ಏಳು ದಿನಗಳಲ್ಲೂ ಅದ್ಭುತವಾಗಿ ನೆನಪುಮಾಡುವ ಅವಕಾಶವನ್ನು ನಾವು ಹೊಂದಿದ್ದೇವೆ.

ದೇವರನ್ನು ಮಾತ್ರ ಆರಾಧಿಸಬೇಕಿರುವದರಿಂದ, ಮನುಷ್ಯರು ಏನು ಮಾಡಬೇಕೆಂಬ ನಿರ್ಣಯವನ್ನು ಆತನೇ ಮಾಡುತ್ತಾನೆ, ಆದ್ದರಿಂದ ಆತನಿಗೆ ಗೌರವ ಉಂಟಾಗುತ್ತದೆ. ಆರಾಧನೆಯ ಕುರಿತು ಮನುಷ್ಯನು ತಾನೇ ನಿರ್ಮಿಸಿರುವ ನಿಯಮಗಳು ದೇವರಿಗೆ ವಿರುದ್ಧವಾಗಿರುತ್ತದೆ. ಅವುಗಳು ದೇವರನ್ನು ಮೆಚ್ಚಿಸುವ ಬದಲು, ಮನುಷ್ಯರನ್ನೇ ಮೆಚ್ಚಿಸುವ ನಿಯಮಗಳಾಗಿರುತ್ತವೆ.

ಅಪೊಸ್ತಲರ ಕೃತ್ಯದಲ್ಲಿರುವ ಯೆಹೂದ್ಯರ ಹಿನ್ನೆಲೆಯಿಂದ, ಬಂದ ಹೊಸ ಕ್ರೈಸ್ತರು, ದೇವರ ಹೊಸ ಸಲಹೆಯನ್ನು ಒಪ್ಪಿಕೊಂಡರು. ಅವರ ಜೀವಿತದಲ್ಲಿ ಉಂಟಾದ ಅದ್ಭುತವಾದ ಬದಲಾವಣೆಯ ಕುರಿತ ದಾಖಲೆಯನ್ನು ಈ ಪುಸ್ತಕ ಹೊಂದಿರುತ್ತದೆ, ಅವರ ನಿದರ್ಶನಗಳು, ಈ ದಿನದ ಕ್ರೈಸ್ತರಿಗೆ ಅನುಸರಿಸತಕ್ಕ ಮಾದರಿಯಾಗಿದೆ.